## ಕರ್ನಾಟಕ ಸರ್ಕಾರದ ನಡವಳಿ

ವಿಷಯ:- ರಾಜ್ಯ ಸರ್ಕಾರಿ ನೌಕರರಿಗೆ ತಾತ್ಕಾಲಿಕ ಪರಿಹಾರ ಮಂಜೂರಾತಿ.

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 39 ಎಸ್‌ಆರ್‌ಪಿ 2011,**
**ಬೆಂಗಳೂರು, ದಿನಾಂಕ 18ನೇ ನವೆಂಬರ್ 2011**

ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಶೀಲಿಸಲು ದಿನಾಂಕ 15-6-2011ರ ಸರ್ಕಾರಿ ಆದೇಶ ಸಂಖ್ಯೆ: ಆಇ 23 ಎಸ್‌ಆರ್‌ಪಿ 2011ರಲ್ಲಿ ಸರ್ಕಾರವು ಅಧಿಕಾರಿ ವೇತನ ಸಮಿತಿಯನ್ನು ರಚಿಸಿದೆ. ಅಧಿಕಾರಿ ವೇತನ ಸಮಿತಿಯು ವರದಿಯನ್ನು ಸಲ್ಲಿಸುವುದನ್ನು ಕಾಯ್ದಿರಿಸಿ, ಮೂಲ ವೇತನದ ಶೇಕಡ 15ರಷ್ಟು ಮಧ್ಯಾಂತರ ಪರಿಹಾರವನ್ನು ಪೂರ್ಣಕಾಲಾವಧಿಯ ಕಾಲಿಕ ನಿಯತ ವೇತನ ಶ್ರೇಣಿಯಲ್ಲಿರುವ ರಾಜ್ಯ ಸರ್ಕಾರಿ ನೌಕರರಿಗೆ, ಸ್ಥಳೀಯ ಸಂಸ್ಥೆಗಳ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಹಾಗು ವಿಶ್ವವಿದ್ಯಾನಿಲಯಗಳ ಬೋಧಕೇತರ ಸಿಬ್ಬಂದಿಗೆ ದಿನಾಂಕ 1ನೇ ನವೆಂಬರ್ 2011 ರಿಂದ ಮಂಜೂರು ಮಾಡಲು ಸರ್ಕಾರವು ನಿರ್ಧರಿಸಿದೆ.

2. ಅದರಂತೆ, ಸರ್ಕಾರವು, ಪೂರ್ಣಕಾಲಾವಧಿಯ ಕಾಲಿಕ ನಿಯತ ವೇತನ ಶ್ರೇಣಿಯಲ್ಲಿರುವ ರಾಜ್ಯ ಸರ್ಕಾರಿ ನೌಕರರಿಗೆ, ಅನುದಾನಿತ ಶಿಕ್ಷಣ ಸಂಸ್ಥೆಗಳ ಮತ್ತು ಸ್ಥಳೀಯ ಸಂಸ್ಥೆಗಳ ನೌಕರರಿಗೆ ಹಾಗು ವಿಶ್ವವಿದ್ಯಾನಿಲಯಗಳ ಬೋಧಕೇತರ ಸಿಬ್ಬಂದಿಗಳಿಗೆ ಅವರ ಮೂಲ ವೇತನದ **ಶೇಕಡ 15 ರಷ್ಟು ತಾತ್ಕಾಲಿಕ ಪರಿಹಾರವನ್ನು ದಿನಾಂಕ 1ನೇ ನವೆಂಬರ್ 2011** ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲು ಹರ್ಷಿಸುತ್ತದೆ.

3. ಈ ಆದೇಶದ ಮೂಲಕ ಮಂಜೂರು ಮಾಡಿದ ತಾತ್ಕಾಲಿಕ ಪರಿಹಾರ ಸೌಲಭ್ಯವು ಪೂರ್ಣಕಾಲಾವಧಿಯ ಕಾಲಿಕ ನಿಯತ ವೇತನ ಶ್ರೇಣಿಯಲ್ಲಿರುವ ಈ ಕೆಳಗಿನವರಿಗೂ ಅನ್ವಯವಾಗುವುದು:

(1) ವರ್ಕ್ ಚಾರ್ಜ್ ಸಿಬ್ಬಂದಿ ನೌಕರರು
(2) ಸಾದಿಲ್ವಾರು ವೆಚ್ಚದಿಂದ ವೇತನ ಪಡೆಯುವ ನೌಕರರು

4. ಆದರೆ, ಈ ಆದೇಶಗಳು, ಯುಜಿಸಿ/ಎಐಸಿಟಿಇ/ಐಸಿಎಆರ್/ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಗಳನ್ನು ಹೊಂದಿರುವವರಿಗೆ ಹಾಗು ನಿವೃತ್ತಿಯ ತರುವಾಯ ಪುನರ್ ನೇಮಕಾತಿ ಹೊಂದಿರುವ ಅಥವಾ ಒಪ್ಪಂದದ ಆಧಾರದ ಮೇಲೆ ನೇಮಕಾತಿ ಹೊಂದಿರುವ ಅಥವಾ ಹೊರಗುತ್ತಿಗೆ ಸೇವೆಯ ಮೇಲೆ ನೇಮಿಸಲ್ಪಟ್ಟಿರುವ ವ್ಯಕ್ತಿಗಳಿಗೆ ಅನ್ವಯವಾಗುವುದಿಲ್ಲ.

5. ತಾತ್ಕಾಲಿಕ ಪರಿಹಾರ ಲೆಕ್ಕಹಾಕುವ ಉದ್ದೇಶಕ್ಕೆ **'ಮೂಲವೇತನ'** ಎಂದರೆ ಸರ್ಕಾರಿ ನೌಕರರು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯಲ್ಲಿ ಪಡೆಯುವ ವೇತನ ಅಥವಾ ಕರ್ನಾಟಕ ಸಿವಿಲ್ ಸೇವಾ (ಕಾಲಬದ್ಧ ಮುಂಬಡ್ತಿ) ನಿಯಮಗಳು, 1983ರಡಿ ಮಂಜೂರಾಗಿರುವ ಆಯ್ಕೆಕಾಲಿಕ ವೇತನ ಮತ್ತು ಕರ್ನಾಟಕ ಸಿವಿಲ್ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ) ನಿಯಮಗಳು, 1991ರಡಿ ಹಿರಿಯ ವೇತನ ಶ್ರೇಣಿಯಲ್ಲಿ ಪಡೆಯುವ ವೇತನ ಮತ್ತು ಅದರಲ್ಲಿ ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ:

(ಅ) ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಅವರಿಗೆ ಸ್ಥಗಿತ ಬಡ್ತಿಯನ್ನು ನೀಡಲಾಗಿದ್ದಲ್ಲಿ ಆ ಸ್ಥಗಿತ ವೇತನ ಬಡ್ತಿ.

(ಆ) 2007ರ ಕರ್ನಾಟಕ ಸರ್ಕಾರಿ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 7ರ ಉಪನಿಯಮ (3)ರ ಮೇರೆಗೆ ನೀಡಲಾಗಿರುವ ಯಾವುದೇ ವೈಯಕ್ತಿಕ ವೇತನ.

(ಇ) ದಿನಾಂಕ 9-5-2002ರ ಸರ್ಕಾರಿ ಆದೇಶ ಸಂಖ್ಯೆ: ಆಇ 13 ಎಸ್‌ಆರ್‌ಪಿ 2002 ರನ್ವಯ 20 ವರ್ಷಗಳ ಸತತ ಸೇವೆಗಾಗಿ ಕಾಲಿಕ ವೇತನ ಶ್ರೇಣಿಯ ಗರಿಷ್ಠ ಹಂತವನ್ನು ಮೀರಿ ಹೆಚ್ಚುವರಿ ವೇತನ ಬಡ್ತಿಯನ್ನು ನೀಡಲಾಗಿದ್ದಲ್ಲಿ ಆ ಹೆಚ್ಚುವರಿ ವೇತನ ಬಡ್ತಿ.

6. ಮೇಲಿನ ಕಂಡಿಕೆ 5ರಲ್ಲಿ ನಿರೂಪಿಸಿರುವುದನ್ನು ಹೊರತುಪಡಿಸಿ ಇತರೆ ಯಾವುದೇ ಉಪಲಬ್ಧಗಳು ಮೂಲವೇತನಕ್ಕೆ ಸೇರತಕ್ಕದ್ದಲ್ಲ.

7. ಸ್ಥಾನಿಕ ಸಂಸ್ಥೆಗಳ (ಮುನಿಸಿಪಾಲಿಟಿಗಳು, ಮುನಿಸಿಪಲ್ ಕಾರ್ಪೋರೇಶನ್‌ಗಳ) ನೌಕರರಿಗೆ ಈ ಸೌಲಭ್ಯವನ್ನು ಮಂಜೂರು ಮಾಡುವುದರಿಂದಾಗಿ ಉಂಟಾಗುವ ವೆಚ್ಚವನ್ನು ಆಯಾ ಸ್ಥಾನಿಕ ಸಂಸ್ಥೆಗಳೇ ಭರಿಸತಕ್ಕದ್ದು.

9. ತಾತ್ಕಾಲಿಕ ಪರಿಹಾರದ ಕಾರಣದಿಂದ ಸಂದಾಯ ಮಾಡಲು ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಶಗಳನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

10. ಈ ಆದೇಶದ ಮೂಲಕ ಮಂಜೂರಾದ ತಾತ್ಕಾಲಿಕ ಪರಿಹಾರದ ಮೊತ್ತವು ವಿಶಿಷ್ಟ ಸಂಭಾವನೆಯಾಗಿದ್ದು, ಇದು ನಿವೃತ್ತಿ ಸೌಲಭ್ಯ / ತುಟ್ಟಿ ಭತ್ಯೆಯನ್ನು ನಿರ್ಧರಿಸುವಾಗ ಅಥವಾ ಬೇರೆ ಯಾವುದೇ ಉದ್ದೇಶಗಳಿಗೆ ಪರಿಗಣಿಸತಕ್ಕದ್ದಲ್ಲ.

11. ಈ ತಾತ್ಕಾಲಿಕ ಪರಿಹಾರದ ವೆಚ್ಚವನ್ನು ವೇತನ ವೆಚ್ಚವನ್ನು ಭರಿಸುವ ಲೆಕ್ಕ ಶೀರ್ಷಿಕೆಯಿಂದಲೇ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುಂದರ ರಾಜ ಗುಪ್ತ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–2).

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 500 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು
2. ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಇಲಾಖಾ ಮುಖ್ಯಾಧಿಕಾರಿಗಳು
4. ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ
6. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
9. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.

14. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
15. ಕಾರ್ಯದರ್ಶಿ, ಅಧಿಕಾರಿ ವೇತನ ಸಮಿತಿ.
16. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
17. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
18. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
19. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
20. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
21. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
22. ವಾರಪತ್ರ/ಶಾಖೆಯ ರಕ್ಷಾ ಕಡತ.

**ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ www.finance.kar.nic.in ವೀಕ್ಷಿಸಿ.**

# PROCEEDINGS OF THE GOVERNMENT OF KARNATAKA

**Subject:- Grant of Interim Relief to State Government employees.**

**GOVERNMENT ORDER NO. FD 39 SRP 2011, BANGALORE, DATED 18th NOVEMBER 2011**

In G.O.No. FD 23 SRP 2011 dated 15-06-2011 Government have constituted an Official Pay Committee for considering various demands of State Government employees. Pending receipt of the recommendations of the Official Pay Committee, Government have decided to sanction Interim Relief at the rate of 15% of basic pay with effect from 1st November 2011 to full time State Government employees who are on regular time scales of pay and full time employees of local bodies and aided educational institutions and non-teaching staff of the Universities.

2. Accordingly, Government are pleased to sanction **Interim Relief at the rate of 15% of basic pay with effect from 1st November 2011** to full time State Government employees who are on regular time scales of pay and full time employees of local bodies and aided educational institutions and non-teaching staff of the Universities.

3. The benefit of the Interim Relief sanctioned by this Order shall also apply to the following categories of employees who are on regular time scale of pay:-

(i) Full time staff borne on the Work-charged Establishments.

(ii) Whole-time employees paid from contingencies.

4. These orders will, however, not apply to the persons who are on UGC/AICTE/ICAR/FNJPC scales of pay and also to those who have been re-employed after retirement or who have been appointed on contract basis or engaged on outsourcing of services basis.

5. For the purpose of calculation of Interim Relief, the term ``**Basic Pay**'' means pay drawn by the Government servant in the scale of pay applicable to the post held by him or in the selection time scale of pay granted under the Karnataka Civil Services (Time Bound Advancement) Rules, 1983 or in the senior scale of pay granted under the Karnataka Civil Services (Automatic Grant of Special Promotion to Senior Scale of Pay) Rules, 1991 and includes –

(a) stagnation increment, if any, granted to him above the maximum of the time scale of pay;

(b) personal pay, if any, granted to him under sub-rule (3) of Rule 7 of the Karnataka Civil Services (Revised Pay) Rules, 2007.

(c) additional increment for 20 years of service, if any, granted to him above the maximum of the time scale of pay in terms of G.O.No. FD 13 SRP 2002 dated 9-5-2002.

6. Basic Pay shall not include any emoluments other than those specified in para 5 above.

7. In respect of the employees of local bodies (Muncipalities/Muncipal Corporations), the expenditure that shall be incurred on account of extension of the benefit sanctioned by this order shall be borne by the concerned local bodies.

8. The payment on account of Interim Relief involving fractions of fifty paise and above shall be rounded off to the next rupee and fractions of less than fifty paise shall be ignored.

9. The amount of Interim Relief sanctioned in this Order will be **sui generis** and shall not count as emoluments for the purpose of pensionary benefits/dearness allowance or any other purpose.

10. The expenditure on Interim Relief will be booked under the same head of account from which the pay is being drawn.

BY ORDER AND IN THE NAME OF THE
GOVERNOR OF KARNATAKA

(SUNDARARAJA GUPTHA)
Deputy Secretary to Government,
Finance Department (Services-2).

The Compiler, Karnataka Gazette for publication in the next issue of the gazette and to supply 500 copies to Finance Department.

To

1. The Chief Secretary/Additional Chief Secretaries to Government.
2. The Principal Secretaries/Secretaries to Government.
3. The Heads of Departments.
4. The Deputy Commissioners of Districts.
5. The Regional Commissioners, Bangalore/Mysore/Belgaum/Gulbarga.
6. The Chief Executive Officers of Zilla Panchayaths.
7. The Principal Accountant General (Civil & Commercial Audit), Karnataka, Bangalore.
8. The Accountant General (Revenue Receipts & Public Works & Forest Audit), Karnataka, Bangalore.
9. The Accountant General (Accounts & Entitlement), Karnataka, Bangalore.
10. The Registrar, High Court of Karnataka, Bangalore.
11. The Registrar, Karnataka Lokayukta, Bangalore.
12. The Registrar, Karnataka Administrative Tribunal, Bangalore.
13. The Secretary, Karnataka Public Service Commission, Bangalore.
14. The Secretary, Karnataka Legislative Assembly/Legislative Council, Bangalore.
15. The Secretary, Official Pay Committee.
16. The Treasury Officer, State Huzur Treasury/District Treasuries.
17. The Director, Karnataka State Archives Department, Vikasa Soudha, Bangalore.
18. The Project Officer, HRMS, Room No.145 'A', M.S.Building, Bangalore.
19. The Senior Research Officer, Pay Research Unit, Department of Expenditure, Ministry of Finance, Government of India, New Delhi.
20. The President, Karnataka State Government Employees Association, Bangalore.
21. All Sections of the Karnataka Government Secretariat.
22. Karnataka Government Secretariat Library/Legislature Library.
23. Weekly Gazette/Section Guard File.

**Visit: www.finance.kar.nic.in**